# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2414 |
| ಸದಸ್ಯರ ಹೆಸರು | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 22.03.2022 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕು ಕೋಟಗಲ್ ಗ್ರಾಮದ ಸರ್ವೆ ನಂ.11 ರಲ್ಲಿ ಜಿ.ಟಿ.ಬಿ.ಕ್ರಷರ್ಸ್ ಇವರು ಕಾನೂನು ಬಾಹಿರವಾಗಿ, ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿಕೊಂಡು, ಸರ್ಕಾರ ನೀಡಿದ ಮಂಜೂರಾತಿಯ ಪ್ರಮಾಣಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಗಣಿಗಾರಿಕೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು, ಕೋಟಗಲ್ ಗ್ರಾಮದ ಸರ್ವೆ ನಂ.11 ರ 5-00 ಎಕರೆ ಪ್ರದೇಶದಲ್ಲಿ ಕಟ್ಟಡ ಕಲ್ಲು ಗಣಿಗಾರಿಕೆಗೆ ಶ್ರೀಮತಿ ಹೆಚ್.ಕೆ.ಸಾವಿತ್ರಿ ಇವರಿಗೆ ದಿನಾಂಕ 07.10.2017 ರಿಂದ ಜಾರಿಗೆ ಬರುವಂತೆ 05 ವರ್ಷಗಳ ಅವಧಿಗೆ ಗುತ್ತಿಗೆ ಮಂಜೂರು ಮಾಡಲಾಗಿದ್ದು, ದಿನಾಂಕ 11.09.2020 ರಂದು ಮೂಲ ಗುತ್ತಿಗೆ ಮಂಜೂರಾತಿ ದಿನಾಂಕ 07.10.2017 ರಿಂದ ಜಾರಿಗೆ ಬರುವಂತೆ 20 ವರ್ಷಗಳ ಅವಧಿಗೆ ವಿಸ್ತರಿಸಿ ಗುತ್ತಿಗೆ ಕರಾರು ಅಮಲ್ಜಾರಿ ಮಾಡಲಾಗಿರುತ್ತದೆ.<br><br>ಸದರಿ ಗುತ್ತಿಗೆ ಅವಧಿಯನ್ನು ವಿಸ್ತರಣೆ ಮಾಡುವ ಪೂರ್ವದಲ್ಲಿ ದಿನಾಂಕ 06.10.2019 ರಂದು ಡ್ರೋನ್ ಕಾರ್ಯ ನಡೆಸಿ ವರದಿ ಪಡೆದಿರುವ ವರದಿಯಲ್ಲಿ, ಗುತ್ತಿಗೆ ಪ್ರದೇಶದಲ್ಲಿ ಗುತ್ತಿಗೆದಾರರು ಮಂಜೂರಾತಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ಉಪಖನಿಜವನ್ನು ತೆಗೆದಿರುವ ಬಗ್ಗೆ ವರದಿಯಾಗಿರುವುದಿಲ್ಲ.<br><br>ದಿನಾಂಕ 14.02.2022 ರಂದು ಹಿರಿಯ ಭೂವಿಜ್ಞಾನಿ, ಚಿಕ್ಕಬಳ್ಳಾಪುರ ಕಚೇರಿಯ ತಾಂತ್ರಿಕ ಅಧಿಕಾರಿಗಳು, ಕಂದಾಯ ಇಲಾಖೆಯ ರಾಜಸ್ವ ನಿರೀಕ್ಷಕರು, ಗುತ್ತಿಗೆದಾರರು ಹಾಗೂ ಗ್ರಾಮಸ್ಥರ ಸಮ್ಮುಖದಲ್ಲಿ ಸ್ಥಳ ಮಹಜರ್ ನಡೆಸಿ ಪಡೆದಿರುವ ವರದಿಯಂತೆ, ಗುತ್ತಿಗೆದಾರರು ಗಡಿಬಾಂದುಗಳನ್ನು ಸ್ಥಾಪಿಸಿ ಸರಿಯಾಗಿ ನಿರ್ವಹಿಸಿರುವುದು ಕಂಡುಬಂದಿರುತ್ತದೆ. ಗುತ್ತಿಗೆ ಪ್ರದೇಶದಲ್ಲಿ ಗುತ್ತಿಗೆದಾರರು ತಂತಿಬೇಲಿ, ನಾಮಫಲಕ ಹಾಗೂ ಸೂಚನಾ ಫಲಕವನ್ನು ಅಳವಡಿಸಿ ನಿರ್ವಹಿಸಿರುತ್ತಾರೆ. ಗುತ್ತಿಗೆದಾರರು ಗುತ್ತಿಗೆ ಒಳಭಾಗದಲ್ಲಿ ಗಣಿ ಕಾರ್ಯ ನಿರ್ವಹಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದು, ನಿಗದಿತ ಖನಿಜ ಪ್ರಮಾಣಕ್ಕಿಂತ ಹೆಚ್ಚು ಉತ್ಪಾದನೆ ಮಾಡಿರುವ ಬಗ್ಗೆ ಮತ್ತೊಮ್ಮೆ ಡ್ರೋನ್ ಸರ್ವೆ ಕಾರ್ಯ ನಡೆಸಿದ ನಂತರ ಖನಿಜ ಪ್ರಮಾಣವನ್ನು ಅಂದಾಜಿಸಬಹುದಾಗಿರುತ್ತದೆ ಎಂದು ವರದಿ ನೀಡಿರುತ್ತಾರೆ. |

...2

| | | |
|---|---|---|
| ಆ) | ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಸ್ಥಳೀಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ಸದರಿ ಕಲ್ಲುಗಣಿ ಗುತ್ತಿಗೆದಾರರು ಗುತ್ತಿಗೆ ಮಂಜೂರಾದ ದಿನಾಂಕದಿಂದ ಇಲ್ಲಿಯವರೆಗೆ ರಾಜಧನ ಹಾಗೂ ಇನ್ನಿತರೇ ಶುಲ್ಕಗಳನ್ನು ಪಾವತಿಸಿಕೊಂಡು ಪರವಾನಿಗೆ ಪಡೆದು ಖನಿಜ ಸಾಗಾಣಿಕೆ ಮಾಡಿರುತ್ತಾರೆ.<br>ಹಿರಿಯ ಭೂವಿಜ್ಞಾನಿ, ಚಿಕ್ಕಬಳ್ಳಾಪುರ ಕಚೇರಿಯ ಅಧಿಕಾರಿಗಳು ಕಾಲಕಾಲಕ್ಕೆ ಸ್ಥಳ ಪರಿಶೀಲನೆ ನಡೆಸಿ ನೀಡಿರುವ ವರದಿಗಳಂತೆ ಹಾಗೂ ಈ ಹಿಂದೆ ದಿನಾಂಕ 06.10.2019 ರಂದು ನಡೆಸಿರುವ ಡ್ರೋಣ್ ಸರ್ವೆ ಕಾರ್ಯ ವರದಿಯಂತೆ ಯಾವುದೇ ಅನಧಿಕೃತ ಗಣಿಗಾರಿಕೆ ನಡೆಸಿರುವುದಿಲ್ಲ. |
| ಇ) | ಈ ಸಂಬಂಧ ಅಧಿಕಾರಿಗಳು ಪದೇ ಪದೇ ಸರ್ಕಾರಕ್ಕೆ ತಪ್ಪು ಮಾಹಿತಿ ನೀಡುತ್ತಿರುವುದು ಗಮನಕ್ಕೆ ಬಂದಿದೆಯೇ ; | ತಾಂತ್ರಿಕ ಅಧಿಕಾರಿಗಳ ವರದಿ ಹಾಗೂ ಡ್ರೋಣ್ ಸರ್ವೆ ವರದಿಯಂತೆ ಮಾಹಿತಿ ನೀಡಲಾಗಿದ್ದು, ತಪ್ಪು ಮಾಹಿತಿ ನೀಡಿರುವುದು ಕಂಡುಬಂದಿರುವುದಿಲ್ಲ. |
| ಈ) | ಬಂದಿದ್ದಲ್ಲಿ, ಇದುವರೆವಿಗೆ ಸರ್ಕಾರದ ಬೊಕ್ಕಸಕ್ಕೆ ಎಷ್ಟು ನಷ್ಟವಾಗಿದೆ; | ತಾಂತ್ರಿಕ ಅಧಿಕಾರಿಗಳ ವರದಿ ಹಾಗೂ ಡ್ರೋಣ್ ಸರ್ವೆ ವರದಿಯಂತೆ ಸರ್ಕಾರದ ಬೊಕ್ಕಸಕ್ಕೆ ಯಾವುದೇ ನಷ್ಟ ಉಂಟಾಗಿರುವುದಿಲ್ಲ ಎಂಬುದಾಗಿ ಹಿರಿಯ ಭೂವಿಜ್ಞಾನಿ, ಚಿಕ್ಕಬಳ್ಳಾಪುರ ರವರು ತಿಳಿಸಿರುತ್ತಾರೆ. |
| ಉ) | ಈ ಸಂಬಂಧ ತಪ್ಪಿತಸ್ಥ ಅಧಿಕಾರಿ / ನೌಕರರ ಹಾಗೂ ಕ್ರಷರ್ ಮಾಲೀಕರ ವಿರುದ್ಧ ತೆಗೆದುಕೊಂಡ ಕಾನೂನು ಕ್ರಮಗಳೇನು? | ತಾಂತ್ರಿಕ ಅಧಿಕಾರಿಗಳ ವರದಿ ಹಾಗೂ ಡ್ರೋಣ್ ಸರ್ವೆ ವರದಿಯಂತೆ ಸರ್ಕಾರದ ಬೊಕ್ಕಸಕ್ಕೆ ಯಾವುದೇ ನಷ್ಟ ಉಂಟಾಗಿರುವುದಿಲ್ಲ ಎಂಬುದಾಗಿ ಹಿರಿಯ ಭೂವಿಜ್ಞಾನಿ, ಚಿಕ್ಕಬಳ್ಳಾಪುರ ರವರು ತಿಳಿಸಿದ್ದು, ಕಾನೂನು ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. |
| ಊ) | ಕಾನೂನು ಬಾಹಿರವಾಗಿ ನಡೆಯುತ್ತಿರುವ ಗಣಿಗಾರಿಕೆಯನ್ನು ರದ್ದುಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ದಿನಾಂಕ 14.02.2022 ರಂದು ಹಿರಿಯ ಭೂವಿಜ್ಞಾನಿ, ಚಿಕ್ಕಬಳ್ಳಾಪುರ ಕಚೇರಿಯ ತಾಂತ್ರಿಕ ಅಧಿಕಾರಿಗಳು, ಕಂದಾಯ ಇಲಾಖೆಯ ರಾಜಸ್ವ ನಿರೀಕ್ಷಕರು, ಗುತ್ತಿಗೆದಾರರು ಹಾಗೂ ಗ್ರಾಮಸ್ಥರ ಸಮ್ಮುಖದಲ್ಲಿ ಸ್ಥಳ ಮಹಜರ್ ನಡೆಸಿ ವರದಿಯನ್ನು ಪಡೆಯಲಾಗಿದ್ದು, ಸದರಿ ವರದಿಯಂತೆ ಕಾನೂನು ಬಾಹಿರವಾಗಿ ಗಣಿಗಾರಿಕೆಯನ್ನು ನಡೆಸಿರುವುದು ಕಂಡು ಬಂದಿರುವುದಿಲ್ಲ ಹಾಗೂ ಸದರಿ ವರದಿಯಲ್ಲಿ ವಿವರಿಸಿರುವಂತೆ ಮತ್ತೊಮ್ಮೆ ಡ್ರೋಣ್ ಸರ್ವೆ ಕಾರ್ಯ ನಡೆಸಿದ ನಂತರ ಖನಿಜ ಪ್ರಮಾಣವನ್ನು ಅಂದಾಜಿಸಬಹುದಾಗಿರುತ್ತದೆ ಎಂದು ವರದಿ ನೀಡಿರುವುದರಿಂದ, ಅದರಂತೆ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ ಸಿಐ 148ಎಂಎಂಎನ್ 2022

Halappa

**(ಆಚಾರ್ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.